ಅಂದು ಅಪ್ಪ ಅಮ್ಮ, ಅಕ್ಕ ಭಾವ ಮತ್ತು ಅಲಿಮಾ ಕಾರು ಬಾಡಿಗೆ ಮಾಡಿ ಮದ್ರಾಸಿಗೆ ಟೂರು ಹೋಗಿದ್ದರು. ಜಮಾತಿನವರೂ ಬೇರೆ ಬೇರೆ ಕಾರುಗಳಲ್ಲಿ ಬಂದಿದ್ದರು. ಸಂಜೆ ಸೂರ್ಯಾಸ್ತದ ಸೊಬಗು ನೋಡಲು ಕಡಲ ಕರೆಗೆ ಬಂದವರನ್ನು ಸ್ವಾಗತಿಸಿದ್ದು, ತೆಂಗಿನ ಮರದೆತ್ತರದ ಸುನಾಮಿ ಅಲೆಗಳು. ತನ್ನ ತಂದೆ ತಾಯಿಯರನ್ನು ಅವು ಸಮುದ್ರದ ಗರ್ಭದಾಳಕ್ಕೆ ಎಳೆದೊಯ್ದಿದ್ದವು. ಭಾವ ಹಿಡಿದೆಳೆಯದಿರುತ್ತಿದ್ದರೆ ಅಲಿಮಾ ಎಂಬ ಪುಟ್ಟ ಜೀವಿ ಈ ಪ್ರಪಂಚದಿಂದ ಮರೆಯಾಗಿ ಹೋಗುತ್ತಿತ್ತು. ಅಪ್ಪ ಅಮ್ಮ ಬದುಕಿ ಬಂದಾರೆಯೇ ಎಂದು ಕಾದು ನೋಡಲು ಪೊಲೀಸರು ಬಿಡಲಿಲ್ಲ. "ಇನ್ನಷ್ಟು ಎತ್ತರದ ಸುನಾಮಿ ಅಲೆಗಳು ಬರಲಿವೆ. ಜೀವ ಉಳಿಯಬೇಕಿದ್ದರೆ ಓಡಿ" ಎಂದು ಲಾಠಿ ಬೀಸಿ ಎಲ್ಲರನ್ನು ಓಡಿಸಿದ್ದರು. ಮರುದಿನ ಪೊಲೀಸ್ ಸ್ಟೇಶನ್ನಿಗೆ ಹೋಗಿ ಕೇಳಿದರೆ, "ಸಿಕ್ಕಿದ ಬಾಡಿಗಳನ್ನು ನಾವು ಸಾಮೂಹಿಕ ದಫನ್ ಮಾಡಿದ್ದೇವೆ. ನೀವಿನ್ನು ಹೋಗಬಹುದು" ಎಂಬ ಉತ್ತರ.

ಎಡೆಬಿಡದೆ ಕಣ್ಣೀರು ಸುರಿಸುವ ಅಲಿಮಾಳನ್ನು ಅಕ್ಕ ಭಾವ ಸಂತೈಸಿದ್ದರು. "ಮೋಳೇ, ಅಲ್ಲಾ ತನಗೆ ಪ್ರಿಯರಾದವರನ್ನು ಬೇಗ ಕರೆಸಿಕೊಳ್ಳುತ್ತಾನೆ. ಉಪ್ಪ ಉಮ್ಮರನ್ನು ಅಲೆಗಳ ರೂಪದಲ್ಲಿ ಕರೆದೊಯ್ದವನು ಪರಮ ದಯಾಳುವಾದ ಅಲ್ಲಾನೇ. ಅವರೀಗ ಅಲ್ಲಾನ ಸಾಮ್ರಾಜ್ಯದಲ್ಲಿ ಸುಖವಾಗಿದ್ದಾರೆ." ಅಲಿಮಾಳಿಗೆ ಅರ್ಥವಾದದ್ದು ಒಂದೇ—ಇನ್ನು ಉಪ್ಪ ಉಮ್ಮ ಬರುವುದಿಲ್ಲ ಎನ್ನುವ ಕಠೋರ ಸತ್ಯ. ಅವಳು ಅಂದು ಹಗಲು ಏನೂ ತಿನ್ನಲಿಲ್ಲ ರಾತ್ರಿನೂ ತಿನ್ನಲಿಲ್ಲ.

ಭಾವ ನಾಜಿರ್ ಅವಳ ತಲೆ ಸವರಿದ. "ನೋಡು ಮೋಳೇ, ಹಾಗೆ ನೋಡಿದರೆ ಮೊನ್ನೆಯ ಅಲೆಗಳಿಗೆ ಸಿಕ್ಕಿ ನಾನು ಮತ್ತು ನಿನ್ನ ಅಕ್ಕ ಸಾಯಬೇಕಿತ್ತು. ಆದರೆ, ನಮ್ಮನ್ನು ಅಲ್ಲಾ ಉಳಿಸಿದ್ದಾನೆ ಯಾಕೆ ಹೇಳು? ಪುಟಾಣಿ ಅಲಿಮಾಳನ್ನು ಚೆನ್ನಾಗಿ ನೋಡಿಕೊಳ್ಳಲಿ ಎಂದು. ನೀನು ಊಟ ಮಾಡಲು ನಾವು ಏನು ಮಾಡಬೇಕು ಮೋಳೇ?" ಅಲಿಮಾ ಕಣ್ಣು ಮೂಗು ಒರಸಿಕೊಂಡಳು. "ನನಗೆ ದಿನಾ ಆಟ ಆಡಲು ಯಾರಾದರೂ ಬೇಕು."

ಅಕ್ಕ ಭಾವ ಮುಖ ಮುಖ ನೋಡಿಕೊಂಡರು. ಅಲ್ಲಾ ಕರುಣಿಸಿದ್ದರೆ ತಮಗೊಂದು ಮಗುವಾಗಿ ಬಿಡುತ್ತಿತ್ತು. ಆಗ ಅಲಿಮಾಳ ಹೊತ್ತು ಹೋಗುತ್ತಿತ್ತು. ಈಗೇನು ಮಾಡುವುದು? ಒಂದು ಬೆಕ್ಕನ್ನು ತರುವುದೇ? ಅದಕ್ಕೆ ಸಿಟ್ಟು ಬಂದಾಗ ಪಂಜಾ ಅರಳಿಸಿ ಹೊಡೆದರೇನು ಗತಿ? ತಾವು ಮುಸ್ಲಿಮರಾದುದರಿಂದ ನಾಯಿ ಸಾಕುವಂತಿಲ್ಲ. ನಾಯಿಯಂಥ ನಿಷ್ಠಾವಂತ ಪ್ರಾಣಿ ಬೇರೆ ಇಲ್ಲ. ಆದರೂ ನಾಯಿಯನ್ನು ಸಾಕಬಾರದು ಅಂತಾರೆ. ಇನ್ನುಳಿದದ್ದು ಆಡು. ಒಂದು ಆಡಿನ ಮರಿಯನ್ನು ತಂದು ಬಿಡುವುದು. ಅದು ದೊಡ್ಡದಾಗುವಾಗ ಅಲಿಮಾಳೂ ದೊಡ್ಡವಳಾಗುತ್ತಾಳೆ. ಮತ್ತೆ ಅದನ್ನು ಮಾರಬಹುದು. ಅದುವೇ ಸರಿ.

ಹಾಗೆ ಬಂದ ಆಡು, ಕುಟ್ಟನಾಗಿ ಅಲಿಮಾಳ ಜೀವವಾಯಿತು. ಆರಂಭದಲ್ಲಿ ಅದು ಅಕ್ಕನ ಪುಟ್ಟ ಹೂದೋಟವನ್ನು ಮೇಯ್ದು ಖಾಲಿ ಮಾಡಿತು. ಸಿಟ್ಟಿನಿಂದ ಅಕ್ಕ ಅದನ್ನು ಹಗಲು ಕಟ್ಟಿ ಹಾಕತೊಡಗಿದಳು. ಒಂದು ಸಲ ಅದು ಹೇಗೋ ಹಗ್ಗ ಬಿಚ್ಚಿ ಪಕ್ಕದ ಬೀಪಾತುಮ್ಮನ ಹರಿವೆಯನ್ನೆಲ್ಲಾ ತಿಂದು ಹಾಕಿತು. ಬೀಪಾತುಮ್ಮ ಕಣ್ಣೀರು ಹಾಕಿದರೂ ಆಡಿಗೆ ಹೊಡೆಯಲು ಅವಳಿಗೆ ಮನಸ್ಸು ಬರಲಿಲ್ಲ. ಅಲಿಮಾಳ ಮನೆಯ ಕೆಳಗಿನದ್ದು ತಾಹಿರಾಳ ಮನೆ. ಅಲಿಮಾಳ ಅಂಗಳದಿಂದ ಕಾಲಿಟ್ಟರೆ ತಾಹಿರಾಳ ಮನೆ ಮಾಡು ಸಿಗುತ್ತದೆ. ಒಂದು ಸಲ ಕಾಣೆಯಾದ ಕುಟ್ಟನನ್ನು ಹುಡುಕುತ್ತಾ ಬಂದವರಿಗೆ ಅವನು ಕಾಣಸಿಕ್ಕಿದ್ದು ತಾಹಿರಾಳ ಮನೆ ಮಾಡಿನಲ್ಲಿ! ನುಸ್ರುತ್‌ಳಿಗೆ ಹೃದಯ ಬಾಯಿಗೆ ಬಂತು. ಅದೆಲ್ಲಾದರೂ ಕೆಳಗೆ ಬಿದ್ದು ಕೈಕಾಲು ಮುರಕೊಳ್ಳುತ್ತಿದ್ದರೆ?... ಅಲ್ಲಾನ ಕರುಣೆ ಎಂದು ಹಗಲು ಅದನ್ನು ಬಲವಾದ ಹಗ್ಗದಿಂದ ಕಟ್ಟಿ ಹಾಕತೊಡಗಿದಳು.

ಅಲಿಮಾಳ ಶಾಲೆಗೆ ಮನೆಯಿಂದ ಒಂದೇ ಕಿ.ಮೀ. ದೂರ. ಅದರಲ್ಲಿ ಐದು ಕ್ಲಾಸುಗಳಿದ್ದರೂ